# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No.**375/2016

**PW**:7

**ದಿನಾಂಕ 03.02.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಎಸ್.ಕೆ.ಟಿ. ವಕೀಲರಿಂದ:**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. 1 ನೇ ಪ್ರತಿವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ತಾಯಿಯ ಹೆಸರು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಜೊತೆ ಇಬ್ಬರು ಅಣ್ಣ ತಮ್ಮಂದಿರು ಇರುತ್ತಾರೆ. 1 ನೇ ಪ್ರತಿವಾದಿಗೆ ಒಬ್ಬ ಸಹೋದರಿ ಇರುತ್ತಾರೆ. ಸದರಿ ಸಹೋದರಿ ಎಂದರೆ ಮೃತ 2 ನೇ ಪ್ರತಿವಾದಿ ಎಂದರೆ ಸರಿ. ನನ್ನ ಸಾಕ್ಷ್ಯಾಪ್ರಮಾಣ ಪತ್ರಿಕೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷ್ಯಾಪ್ರಮಾಣ ಪತ್ರಿಕೆಯಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಓದಿ ಹೇಳಿರುತ್ತಾರೆ. ಸಾಕ್ಷ್ಯಾ ಪ್ರಮಾಣ ಪತ್ರಿಕೆಯಲ್ಲಿ ದಾವಾ ಆಸ್ತಿಯ ಸರ್ವೆ ನಂಬರ ಮತ್ತು ವಿಸ್ತೀರ್ಣವನ್ನು ಬರೆದಿಲ್ಲ. ದಾವಾ ಆಸ್ತಿಯ ಸರ್ವೆ ನಂಬರ ಮತ್ತು ವಿಸ್ತೀರ್ಣವನ್ನು ನನಗೆ ಹೇಳಲು ಬರುವುದಿಲ್ಲ. ಪಿತ್ರಾರ್ಜಿತ ಆಸ್ತಿಯು ಮೃತ 2 ಮತ್ತು 3 ನೇ ಪ್ರತಿವಾದಿಯರಿಗೂ ಪಾಲು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು 2 ಪಾಲು ಆಗಿದ್ದು ಅದು 1 ನೇ ಪ್ರತಿವಾದಿ ಮತ್ತು 3(ಎ) ಪ್ರತಿವಾದಿ ಇವರಿಗೆ ಆಗಿದ್ದು ಅದರ ಬಗ್ಗೆ ದಾಖಲೆ ಆಗಿರುತ್ತದೆ. ಸದರಿ ದಾಖಲೆಯನ್ನು ನಾನು ನೋಡಿರುತ್ತೇನೆ. ಸದರಿ ವಾಟ್ನಿಯಲ್ಲಿ 1 ನೇ ಪ್ರತಿವಾದಿ ಮತ್ತು 3(ಎ) ಪ್ರತಿವಾದಿ ಇವರಿಗೆ ಮಾತ್ರ ಪಾಲು ನೀಡಿದ್ದು ಅವರ ಸಹೋದರಿ ಮತ್ತು ತಾಯಿಯು ಅವರಿಗೆ ಆಸ್ತಿಯನ್ನು ಬಿಟ್ಟುಕೊಟ್ಟು ಅದರ ಬಗ್ಗೆ ಸಹಿಯನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮೃತ 2 ಮತ್ತು 3 ನೇ ಪ್ರತಿವಾದಿಯರು ದಾಖಲೆಗೆ ಸಹಿ ಮಾಡಿದ ಬಗ್ಗೆ ನಾನು ನೋಡಿರುತ್ತೇನೆ. ಸದರಿ ದಾಖಲೆಯು ನೊಂದಾಗಿರುವುದಿಲ್ಲ ಆದರೆ ಗ್ರಾಮ ಲೆಕ್ಕಾಧಿಕಾರಿಯವರ ಮುಂದೆ ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಮೃತ 2 ಮತ್ತು 3 ನೇ ಪ್ರತಿವಾದಿಯರಿಗೆ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ. ಮೃತ 3 ನೇ ಪ್ರತಿವಾದಿಯವರು ತನ್ನ ಮಗಳ ಹತ್ತಿರ ಇದ್ದು ಅವರೇ ಜೋಪಾನ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಮೃತ 3 ನೇ ಪ್ರತಿವಾದಿಯರ ಯೋಗಕ್ಷೇಮವನ್ನು ಮೃತ 2 ನೇ ಪ್ರತಿವಾದಿಯು ಮಾಡುತ್ತಿದ್ದ

-2-

ಕಾರಣ ಅವರಿಗೆ ಏನಾದರು ತಲುಪಲಿ ಎಂದು ಪ್ರತಿವಾದಿ ನಂ.2(ಎ) ಇವರಿಗೆ ಒಂದು ನೊಂದಾದ ಮೃತ್ಯು ಪತ್ರವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮರಣ ಶಾಸನದ ಪ್ರಕಾರ ಮೃತ 3 ನೇ

ಪ್ರತಿವಾದಿಯ ಹಿಸ್ಸೆಯನ್ನು ಪ್ರತಿವಾದಿ ನಂ.2(ಎ) ಇವರು ಪಡೆದುಕೊಳ್ಳುವಂತಹ ಹಕ್ಕು ಹೊಂದಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಇವರಿಗೆ ಪಾರ್ವತಿ ಎನ್ನುವ ಹೆಂಡತಿ ಇರುತ್ತಾರೆ ಎಂದರೆ ಸಾಕ್ಷಿಯು ಶಾಂತಾಬಾಯಿ ಎನ್ನುವವರು ಇರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ 2 ನೇ ವಾದಿಯು ಮೊದಲನೇ ಹೆಂಡತಿ ಇರುವುದಿಲ್ಲ ಬದಲಾಗಿ ಪಾರ್ವತಿ ಇರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಜಯಶ್ರೀ ಮತ್ತು ಶಿವಾನಂದ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಪಾರ್ವತಿ ಎಂಬ ಹೆಂಡತಿ ಜಯಶ್ರೀ ಮತ್ತು ಶಿವಾನಂದ ಎನ್ನುವ ಮಕ್ಕಳು ಇದ್ದರು ಸಹ ನಾನು 1 ನೇ ವಾದಿಯಿಂದ ಹಣವನ್ನು ಪಡೆದುಕೊಂಡು ಇಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಮಾಡಿರುವ ಸುಳ್ಳು ದಾವೆಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No.**375/2016

**PW**:6

**ದಿನಾಂಕ 03.02.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಎಸ್.ಕೆ.ಟಿ. ವಕೀಲರಿಂದ:**

1 ನೇ ಪ್ರತಿವಾದಿಯ ಪರಿಚಯ ಇರುತ್ತದೆ. 1 ನೇ ಪ್ರತಿವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ತಾಯಿಯ ಹೆಸರು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯರು ಎಷ್ಟು ಜನರು ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯರು ಎಂದು ನನಗೆ ಗೊತ್ತಿಲ್ಲ. ನನ್ನ ಸಾಕ್ಷ್ಯಾ ಪ್ರಮಾಣ ಪತ್ರಿಕೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷ್ಯಾಪ್ರಮಾಣ ಪತ್ರಿಕೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಓದಿ ಹೇಳಿಲ್ಲ. ಈ ದಾವೆಯನ್ನು ಜಮೀನದ ಸಲುವಾಗಿ ಮಾಡಿರುತ್ತಾರೆ. ನನಗೆ ದಾವಾ ಜಮೀನಿನ ಸರ್ವೆ ನಂಬರ ಗೊತ್ತಿಲ್ಲ. ದಾವಾ ಜಮೀನುಗಳ ವಿಸ್ತೀರ್ಣ ಮತ್ತು ಅವು ಯಾರಿಗೆ ಸೇರಿರುತ್ತವೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ದಾವಾ ಜಮೀನಿನ ದಾಖಲೆಗಳನ್ನು ನೋಡಿಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರು ಸಹ 1 ನೇ ಪ್ರತಿವಾದಿಯ ಮಗನಿಂದ ಹಣವನ್ನು ಪಡೆದುಕೊಂಡು ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಪಾರ್ವತಿ ಎಂಬ ಹೆಸರಿನ ಹೆಂಡತಿ ಇರುತ್ತಾರೆ ಎಂದರೆ ಸರಿ. ಸದರಿ ಪಾರ್ವತಿ ಇವರಿಗೆ ಶಿವಾನಂದ ಮತ್ತು ಜಯಶ್ರೀ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯ ತಾಯಿ, ಅಕ್ಕ ಇವರಿಗೂ ಸಹ ಪಾಲು ಇರುತ್ತದೆ ಎಂದರೆ ಸರಿ. ಸದರಿ ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯ ಹೆಂಡತಿ ಪಾರ್ವತಿ, ಮಕ್ಕಳಾದ ಶಿವಾನಂದ ಮತ್ತು ಜಯಶ್ರೀ ಇವರಿಗೂ ಪಾಲು ಇರುತ್ತದೆ ಎಂದರೆ ಸರಿ. ದಾವೆಯನ್ನು ಯಾವಾಗ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ವಾದಿಯರ ಮತ್ತು ಪ್ರತಿವಾದಿಯರ ಮನೆತನದ ಬಗ್ಗೆ ಮತ್ತು ದಾವಾ ವಸ್ತು ವಿಷಯದ ಬಗ್ಗೆ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.